**Code No. 08 X(B)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜೂನ್, 2016

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಸಾಮಾನ್ಯವಾಗಿ ವೇದಾಂತದ ಮುಖ್ಯ ತತ್ವಗಳನ್ನು ಕೇಳಿದ ಮೇಲೆ ಇವನ್ನು ಬಹುಯತ್ನದಿಂದ ಮೈಗೂಡಿಸಿಕೊಳ್ಳಬೇಕಾಗುವುದು, ಏಕೆಂದರೆ ಯಾರ ಬುದ್ಧಿಯಲ್ಲಿ ನೋಡಿದರೂ ಪ್ರಾಪಂಚಿಕವಾದ ಸುಖವನ್ನು ಸವಿಯಬೇಕೆಂಬ ವಾಸನೆಯು ತುಂಬ ತುಳುಕುತ್ತಿರುವುದು. ಅದು ಒಬ್ಬರಲ್ಲಿ ಹೆಚ್ಚಾಗಿರಬಹುದು, ಮತ್ತೊಬ್ಬರಲ್ಲಿ ಕಡಿಮೆ ಆಗಿರಬಹುದು; ಅಂತೂ ಇಲ್ಲದೇ ಇಲ್ಲ. ಹೀಗೆ ಬುದ್ಧಿ ತುಂಬ ಪ್ರಾಪಂಚಿಕವಾದ ಸುಖದ ವಾಸನೆ ತುಂಬಿಕೊಂಡು ಇರುವುದರಿಂದ, ಬ್ರಹ್ಮ ವಿಚಾರದ ವಾಸನೆಯನ್ನು ಹೊರಿಸುವ ಯತ್ನವನ್ನು ನಡೆಸಬೇಕು. ಹೀಗೆ ಮಾಡುತ್ತಾ ಈಗ ಪ್ರಾಪಂಚಿಕ ಸುಖದ ವಾಸನೆಯು ಎಷ್ಟು ತುಂಬ ಆಗಿದೆಯೋ ಬ್ರಹ್ಮ ವಿಚಾರದ ವಾಸನೆಯು ಅಷ್ಟು ತುಂಬ ಆಗುವಂತೆ ಮಾಡಬೇಕು. ಈಗ ಪ್ರಾಪಂಚಿಕವಾದ ಸುಖದ ವಾಸನೆಯು ಬ್ರಹ್ಮ ವಿಚಾರದ ವಾಸನೆಗೆ ಸ್ಥಳ ಇಲ್ಲದಂತೆ ಮಾಡಿರುವ ಹಾಗೆ ಬ್ರಹ್ಮ ವಿಚಾರದ ವಾಸನೆಯು ಪ್ರಾಪಂಚಿಕವಾದ ಸುಖದ ವಾಸನೆಗೆ ಬುದ್ಧಿಯಲ್ಲಿ ನಿಲ್ಲುವುದಕ್ಕೆ ನೆರಳಿಲ್ಲದಂತೆ ಮಾಡಬೇಕು. ಈಗ ಪ್ರಾಪಂಚಿಕವಾದ ಸುಖದ ವಾಸನೆಯು ತಾನೇ ಬುದ್ಧಿ ತುಂಬ ತುಂಬಿಕೊಂಡು ತನ್ನ ಸೂತ್ರದ ಬೊಂಬೆಯಂತೆ ಮನುಷ್ಯನನ್ನು ಕುಣಿಸುವ ಹಾಗೆ, ಬ್ರಹ್ಮವಿಚಾರದ ವಾಸನೆಯು ತಾನೇ ಬುದ್ಧಿಯ ತುಂಬ ತುಂಬಿಕೊಂಡು ಮನುಷ್ಯನ ನಡೆ ನುಡಿಗಳಲ್ಲೆಲ್ಲ, ತಾನೇ ತಾಂಡವ ಆಡಬೇಕು.

ಸಾಮಾನ್ಯವಾಗಿ ಎಲ್ಲರೂ ಮೊದಲು ಬ್ರಹ್ಮ ಸ್ವರೂಪದ ವಿಚಾರವನ್ನು ಕೇಳಿ ತಿಳಿದುಕೊಂಡು, ಅದರ ಬಹುದೊಡ್ಡ ಫಲವನ್ನು ಅನುಭವಿಸಿ, ಅದಕ್ಕಾಗಿ ಅದನ್ನು ಮೈಗೂಡಿಸಿಕೊಳ್ಳುವುದಕ್ಕೆ ತಮ್ಮ ಸರ್ವ ಪ್ರಯತ್ನವನ್ನು ಮಾಡಬೇಕು. ಈ ಯತ್ನವೆಂಬುದು ಕರ್ಮವೆಂಬ ದಾರಿ, ಭಕ್ತಿಯೆಂಬ ದಾರಿ, ಯೋಗವೆಂಬ ದಾರಿ, ವಿಚಾರವೆಂಬ ದಾರಿ, ಎಂಬ ನಾಲ್ಕು ದಾರಿಗಳ ರೂಪದಲ್ಲಿದ್ದು, ಈ

[ Turn over

ನಾಲ್ಕು ದಾರಿಗಳು ಒಂದಕ್ಕೊಂದು ಸಂಬಂಧವಿಲ್ಲದ ಬೇರೆ ಬೇರೆಯಲ್ಲ, ಇವು ನಾಲ್ಕು ಒಂದೇ ದಾರಿ. ಕೆಲವು ದೂರದ ತನಕ ಅದಕ್ಕೆ ಒಂದೊಂದು ಹೆಸರು ಅಷ್ಟೇ. ಈಗ ನಾವು ಪ್ರಾಪಂಚಿಕವಾದ ತಿಳುವುಗಳಲ್ಲಿ, ಪ್ರಾಪಂಚಿಕವಾದ ಕೆಲಸಗಳಲ್ಲಿಯೂ ತುಂಬಾ ಮುಳುಗಿರುವುದು. ಏಣಿಯ ಕಾಗದದ ಜೀಡು. ಅಕ್ಷರಗಳ ಮೂಡುವಿಕೆಗೆ ಅಡ್ಡಿ ಆಗಿರುವಂತೆ ಪ್ರಾಪಂಚಿಕ ವಿಚಾರಗಳು ಬುದ್ಧಿಯಲ್ಲಿ ಬ್ರಹ್ಮದ ಮೂಡುವಿಕೆಗೆ ಅಡ್ಡಿ ಆಗಿರುವುವು. ಆದುದರಿಂದ ಇವುಗಳ ಪೊಗರನ್ನು ಮುರಿಯುವುದಕ್ಕಾಗಿ ಈಶ್ವರ ಸಂಬಂಧವಾದ ಕೆಲಸಗಳನ್ನು ವೇದವು ಹೇಳುವ ರೀತಿಯಲ್ಲಿ ಅನುಷ್ಠಾನ ಮಾಡುವುದು. ಕರ್ಮವೆಂಬ ದಾರಿ, ಈಶ್ವರನ ಕಥೆಗಳನ್ನು ಕೇಳೋಣೋ, ಹೇಳೋಣೋ, ಹಾಡೋಣಾ, ನೆನೆಯೋಣ, ಮೊದಲಾಗಿ ತನ್ನ ಮನಸ್ಸಿಗೆ ರುಚಿಸಿದ ರೀತಿಯಲ್ಲಿ ಈಶ್ವರನ ಕಡೆ ಒಲವನ್ನು ಹೆಚ್ಚಿಸಿಕೊಳ್ಳುವುದು ಭಕ್ತಿಯೆಂಬ ದಾರಿ. ಈ ಒಲವನ್ನು ಕದಲದಂತೆ ಈಶ್ವರನಲ್ಲಿಯೇ ನಿಲ್ಲಿಸುವುದು ಯೋಗವೆಂಬ ದಾರಿ. ಈ ಮೂರು ದಾರಿಗಳಲ್ಲಿ ನಡೆಯುವ ಹೊತ್ತಿಗೆ, ಅದುವರೆಗಿನ ನಡೆಗೆಯ ತಿಕ್ಕಾಟದಿಂದ ಬುದ್ಧಿಯಲ್ಲಿರುವ ಪ್ರಾಪಂಚಿಕವಾದ ಜಿಡ್ಡು ಹಾರಿಹೋಗುವುದರಿಂದ, ಅದಕ್ಕೆ ಬ್ರಹ್ಮದ ವಿಚಾರವನ್ನು ಅಂಟಿಕೊಂಡು ಬೆಳೆಸುವುದು ವಿಚಾರವೆಂಬ ದಾರಿ. ಅದರಲ್ಲಿ ಸಾಗಿದಾಗ ಬ್ರಹ್ಮವು ಅಂಗಯ್ಯಾಳಗಣ ನೆಲ್ಲಿಯ ಕಾಯಿಯಂತೆ ಸ್ಪಷ್ಟವಾಗಿ ತಿಳಿಯುವುದು.

ಈಗ ಕರ್ಮವೆಂಬ ದಾರಿಯ ವಿವರಣೆಯನ್ನು ನೋಡೋಣ. ಇಲ್ಲಿ ಕರ್ಮವೆಂಬ ಮಾತಿಗೆ ಬ್ರಹ್ಮದ ಒಲವನ್ನು ಪಡೆಯುವುದಕ್ಕಾಗಿ ವೇದದಲ್ಲಿ ಹೇಳಿರುವ ಕರ್ಮವೆಂಬ ಅರ್ಥವನ್ನಿಟ್ಟುಕೊಳ್ಳಬೇಕು. ದೇಹೇಂದ್ರಿಯಗಳ ಸುಖಕ್ಕಾಗಿ ಮಾಡುವ ಕೆಲಸವನ್ನು ಕುರಿತು ವೇದವೇನೂ ಹೇಳುವುದಿಲ್ಲ. ಕ್ರಮವೆಂಬುದು ಬ್ರಹ್ಮವೆಂಬ ನೆಲೆಗೆ ಮುಟ್ಟಿಸುವ ದಾರಿ. ಈ ದಾರಿಯಲ್ಲಿ ಸಾಗಿದರೆ ಒಳ್ಳೆಯದಾಗುತ್ತದೆ.

ಆದ್ದರಿಂದ ಇಲ್ಲಿ ಕರ್ಮವೆಂದರೆ ಬ್ರಹ್ಮದ ಒಲವನ್ನು ಪಡೆಯುವುದಕ್ಕೆ ಮಾಡಬೇಕಾಗಿರುವ, ವೇದದಲ್ಲಿ ಹೇಳಿರುವ ಕೆಲಸಗಳೆಂದರ್ಥ. ಜೀವನದ ಸುಖಕ್ಕಾಗಿ ಮಾಡುವ ಕೆಲಸವು ಮನುಷ್ಯನನ್ನು ಹುಟ್ಟು ಸಾವುಗಳಿಗೆ ತಾಳತಕ್ಕದಾದ್ದರಿಂದ, ಅದನ್ನು ಆದಷ್ಟು ಕಡಿಮೆ ಮಾಡಿಕೊಳ್ಳುತ್ತಾ ದೇವರನ್ನು ನೆನೆಯಬೇಕು.